CollegeDekho
Discover • Prepare • Achieve
www.collegedekho.com

**M – 2020**

## Subject Code : 01 (NS)

# KANNADA

Time : 3 Hours 15 Minutes] [Total No. of questions : 55] [Max. Marks : 100

### ಅ – ವಿಭಾಗ

I. ಕೆಳಗೆ ಕೊಟ್ಟಿರುವ **ಎಲ್ಲಾ** ಪ್ರಶ್ನೆಗಳಿಗೆ **ಒಂದೊಂದು** ಪೂರ್ಣ ವಾಕ್ಯದಲ್ಲಿ ಉತ್ತರಿಸಿ. **(10 × 1 = 10)**

1) ಹಗೆಯನ್ನು ಏನೆಂದು ಉಪೇಕ್ಷಿಸಬಾರದೆಂದು ಸೋಮನಾಥನು ಹೇಳಿದ್ದಾನೆ?

2) ತತ್ವಜ್ಞಾನವನ್ನು ಕೇಳದವರಾರು?

3) ಯಾವುದಕ್ಕೆ ಸೆಳವಿದೆಯೆಂದು ಬೇಂದ್ರೆ ಹೇಳುತ್ತಾರೆ?

4) ಕವಯತ್ರಿ ಸುಕನ್ಯಾಮಾರುತಿ ಯಾರಲ್ಲಿ ಮೊರೆ ಇಡುತ್ತಾರೆ?

5) ಸ್ಥಳೀಯ ಭಾಷೆ ಕಲಿಯದ ಅನ್ಯಭಾಷಿಕರು ಏನಾಗುತ್ತಾರೆ?

6) ಕನ್ನಡ ಕಸ್ತೂರಿಯಲ್ಲವೇ! ಎಂದವರಾರು?

7) ಕಲಿಯುಗದ ಅಮೃತ ಯಾವುದು?

8) ಕೃಷ್ಣೇಗೌಡರ ಆನೆಯ ಹೆಸರೇನು?

9) ಆನೆಶಾಸ್ತ್ರದವನು ಏನೆಂದು ಭವಿಷ್ಯ ನುಡಿದನು?

10) ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ?

CollegeDekho
Discover • Prepare • Achieve
www.collegedekho.com

## ಆ – ವಿಭಾಗ

II. (ಅ) **ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**(4 × 2 = 8)**

11) ಉರಿಲಿಂಗ ಪೆದ್ದಿಯ ಪ್ರಕಾರ ಗುರುವಿನ ಲಕ್ಷಣಗಳೇನು?

12) ದ್ರೌಪದಿ ತಾನು ಘೋರತರ ವಿಷ ಕುಡಿಯುವುದಾಗಿ ಏಕೆ ಹೇಳುತ್ತಾಳೆ?

13) ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?

14) ಮುದುಕ ಏನೆಂದು ಗೋಗರೆಯುತ್ತಾನೆ?

15) ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಯಾವ–ಯಾವುದಕ್ಕೆ ಹೋಲಿಸಲಾಗಿದೆ?

(ಆ) **ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**(3 × 2 = 6)**

16) ಮಾರ್ಷನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

17) ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾಮಾನಾ ಅಪೇಕ್ಷಿಸಿದ್ದಾರೆ?

18) ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ?

19) ಹಳ್ಳಿಯ ಚಹಾದ ಅಂಗಡಿಯೆಂದರೆ ಹೇಗಿರುತ್ತದೆ?

CollegeDekho
Discover • Prepare • Achieve
www.collegedekho.com

(ಇ) **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ.

**(3 × 2 = 6)**

20) ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?

21) ನಾಯಿಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?

22) ಡ್ರೈವರ್ ಅಬ್ಬಾಸ್–ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?

23) ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

## ಇ – ವಿಭಾಗ

III. (ಅ) **ಯಾವುದಾದರೂ ಎರಡು** ವಾಕ್ಯಗಳ ಸಂದರ್ಭವನ್ನು ಸೂಚಿಸಿ, ಸ್ವಾರಸ್ಯ ಬರೆಯಿರಿ.

**(2 × 3 = 6)**

24) ಅಸಾಧ್ಯಮಪ್ಪ ಮರುವಕ್ಕಮಿಲ್ಲ

25) ತೃಣವೇ ಪರ್ವತವಲ್ಲವೇ.

26) ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ.

(ಆ) **ಯಾವುದಾದರೂ ಒಂದು** ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1 × 3 = 3)**

27) ದುರಂತದ ಮೂಲಬೀಜಗಳು ಚಹಾಗಿಡದ ರೂಪದಲ್ಲಿ ಬಂದವು.

28) ನಿನಗಾವ ರಸದೊಳಿಷ್ಟಂ?

CollegeDekho
Discover · Prepare · Achieve


(ಇ) **ಯಾವುದಾದರೂ ಒಂದು** ವಾಕ್ಯದ ಸಂದರ್ಭವನ್ನು ಸೂಚಿಸಿ, ಸ್ವಾರಸ್ಯ ಬರೆಯಿರಿ.

**(1 × 3 = 3)**

29) ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳಿಕೋ.

30) ಕಂಬದ ಮೇಲೆ ಯಾಕೋ ಕೈಲಾಸ ಕಂಡ ಹಾಗೆ ಇದೆಯಲ್ಲಾ.

## ಈ – ವಿಭಾಗ

IV. (ಅ) **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಐದು–ಆರು** ವಾಕ್ಯಗಳಲ್ಲಿ ಉತ್ತರಿಸಿ.

**(3 × 4 = 12)**

31) ಬಸವಣ್ಣನವರ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು?

32) ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?

33) ಹೆಣ್ಣು ಮಕ್ಕಳ ದುಃಖವನ್ನು ಬಲ್ಲವರು ಯಾರು? ಹೇಗೆ?

34) ಮುಂಬೈ ಜಾತಕದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ?

(ಆ) **ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಐದು–ಆರು** ವಾಕ್ಯಗಳಲ್ಲಿ ಉತ್ತರಿಸಿ.

**(2 × 4 = 8)**

35) ಕಣ್ಣು ನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು?

36) ಲೇಖಕಿಯ ಪತಿಯ ಮೂತ್ರಪಿಂಡದ ಕಲ್ಲು ಕರಗಿ ಹೋದದ್ದು ಹೇಗೆ?

37) ಚಿನ್ನಮ್ಮ ಬೆಳ್ಳಿಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣವೇನು?

CollegeDekho
Discover • Prepare • Achieve
www.collegedekho.com

(ಇ) **ಯಾವುದಾದರೂ ಎರಡು** ಪ್ರಶ್ನೆಗಳಿಗೆ **ಐದು–ಆರು** ವಾಕ್ಯಗಳಲ್ಲಿ ಉತ್ತರಿಸಿರಿ.

**(2 × 4 = 8)**

38) ದುರ್ಗಪ್ಪನಿಗೆ ಲೈನ್‌ಮೆನ್ ಕೆಲಸ ರೋಸಿ ಹೋಗಲು ಕಾರಣಗಳೇನು?

39) ಪೋಸ್ಟ್‌ಮನ್ ಜಬ್ಬಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

40) ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯಗಳೇನು?

## ಉ – ವಿಭಾಗ

V. **ಯಾವುದಾದರೂ ಒಂದು** ಪದ್ಯದ ಭಾವಾರ್ಥವನ್ನು ಬರೆಯಿರಿ. **(1 × 5 = 5)**

41) ಗುಣಪರಿಪಾಲನಾರ್ಥಮೆನಗಂ ಬಗೆದೋಚಿದಳಿಲ್ಲ ದಿವ್ಯಭೂ
ಷಣವಸನಾಂಗರಾಗ ಮುಮನೊಲ್ಲದೆ ಖೇಚರರಾಜ್ಯಲಕ್ಷ್ಮಿಯಂ
ತೃಣಸಮನಾಗೆ ಭಾವಿಸಿದಳೀ ಸತಿಯುಂ ಮೊದಲಾಗೆ, ಪೌರುಷ
ಪ್ರಣಯಿಯೆನಿಂತಪೇಕ್ಷಿಸುವೆನೇ ಗುಣಹಾನಿಯನ್ನೆನ ಪಾಪದಿಂ

42) ಶಿಲುಬೆಯೇರಿದ್ದಾನೆ ಜೀಸಸ್ ಗೋಡೆಯಲ್ಲಿ ;
ಬಾಗಿದ ಶಿರ
ಕುತ್ತಿಗೆಯಲಿ ಉಬ್ಬಿದೊಂದು ನರ,
ಯಾತನೆಗೂ ನಲ್ವಾತನೇ ನುಡಿವ ಮುಖಮುದ್ರೆ ;
ತೆರೆದಿದೆ
ಎನ್ನುವಂತಿದೆ ;
ಕೊಲೆಗಡುಕ ಬರಬ್ಬನ ವಕಾಲತ್ತು ನಡೆಸಿದವರೆ,
ಎಡಕ್ಕೊಬ್ಬ ಬಲಕ್ಕೊಬ್ಬ ಕಳ್ಳನ ತೂಗಿ ಸನ್ಮಾನಿಸಿದವರೆ,
ಮನ್ನಿಸಲಿ ನಿಮ್ಮನ್ನ – ಆ ದೇವರೇ!

CollegeDekho
Discover • Prepare • Achieve



## ಭಾಷಾಭ್ಯಾಸ

VI. (ಅ) ಈ ಕೆಳಗಿನವುಗಳಲ್ಲಿ **ಯಾವುದಾದರೂ ಆರಕ್ಕೆ** ಸೂಚನೆಗನುಗುಣವಾಗಿ ಉತ್ತರಿಸಿ.

**(6 × 2 = 12)**

43) ಈ ಪದಗಳ ಅರ್ಥ ಬರೆಯಿರಿ.

1) ಮಸಕ

2) ಪಂಕ

44) ಈ ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ.

1) ಪುಷ್ಪ

2) ಸಲಿಲ

45) ಈ ಪದಗಳ ತದ್ಭವ ರೂಪ ಬರೆಯಿರಿ.

1) ಪುಸ್ತಕ

2) ಭಂಗ

46) ಈ ಕ್ರಿಯಾಪದಗಳ 'ಧಾತು' ಗುರುತಿಸಿ.

1) ಸೋತನು

2) ಬಂದಳು

47) ಈ ಪದಗಳಲ್ಲಿನ ವಿಭಕ್ತಿಯ ಹೆಸರನ್ನು ಬರೆಯಿರಿ.

1) ಲೋಕದೊಳ್

2) ಕುದುಪನನ್ನು

CollegeDekho
Discover • Prepare • Achieve
www.collegedekho.com

48) ಈ ಪದಗಳ ಕಾಲವನ್ನು ಬರೆಯಿರಿ.

1) ಹೋಗುತ್ತಾರೆ

2) ಹೇಳಿದರು

49) ಈ ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ.

1) ಗಾಳಿಗೆ ತೂರು

2) ಅಜ್ಜನ ಕಾಲದ್ದು

(ಅ) **ಯಾವುದಾದರೂ ಒಂದನ್ನು** ಕುರಿತು ಪ್ರಬಂಧವನ್ನು ಬರೆಯಿರಿ. **(1 × 5 = 5)**

50) ಪ್ಲಾಸ್ಟಿಕ್‌ಮುಕ್ತ ಭಾರತ.

51) ಹೆಚ್ಚುತ್ತಿರುವ ವೃದ್ಧಾಶ್ರಮಗಳು.

(ಇ) **ಯಾವುದಾದರೂ ಒಂದನ್ನು** ಕುರಿತು ಪತ್ರವನ್ನು ಬರೆಯಿರಿ. **(1 × 4 = 4)**

52) ಶಿಕ್ಷಕ ದಿನಾಚರಣೆಯ ಮಹತ್ವ ಕುರಿತು ಗೆಳೆಯ/ಗೆಳತಿಗೊಂದು ಪತ್ರ ಬರೆಯಿರಿ.

53) ವರ್ಗಾವಣೆ ಪತ್ರವನ್ನು ಕೋರಿ ಸಂಬಂಧಪಟ್ಟ ಅಧಿಕಾರಿಗೊಂದು ಪತ್ರ ಬರೆಯಿರಿ.

(ಈ) ಈ ಕೆಳಗಿನ ಗಾದೆಗಳಲ್ಲಿ **ಒಂದನ್ನು** ವಿಸ್ತರಿಸಿ ಬರೆಯಿರಿ. **(1 × 4 = 4)**

54) ಕೆಲವರು ಗಳಿಸಿದರೆ ಕೆಲವರು ಉಂಡು ಜಾರುವರು.

55) ಅತಿ ಆಸೆ ಗತಿಗೇಡು.